ವಿ. ಹೇಮಂತಕುಮಾರ್, ಬೆಂಗಳೂರು
ಚಂದ್ರಮುಖಿಯರಂತೆ ಸೂರ್ಯಮುಖಿಯರೂ ಇರುವರೆ?



ಸನ್‌ಟ್ಯಾನ್ ಲೋಷನ್ ಸವರಿಕೊಂಡು ಸೂರ್ಯನಿಗೆ ಮೈ–ಮುಖ ಒಡ್ಡಿಕೊಂಡವರೆಲ್ಲ ಸೂರ್ಯಮುಖಿಯರೇ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಅಪ್ಪ ಅಂದರೆ ಹೆಗಲು; ಅಮ್ಮ ಅಂದರೆ ಮಡಿಲು. ಹೆಂಡತಿ ಅಂದರೆ?
ಕೆಲವರಿಗಂತೂ – ದಿಗಿಲು.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಕೆಲವೊಮ್ಮೆ ಲಾಕ್‌ಡೌನೇ ಮುಂದುವರೆದಿದ್ದರೆ ಚೆನ್ನಿತ್ತು ಅನ್ನಿಸಲು ಕಾರಣ?
ಪಲ್ಯೂ–ಶನಿಕಾಟ.

ಎಸ್.ಎನ್. ಮಹಾಬಲರಾವ್, ಎನ್ನಾರ್ಪುರ
ಮುಟ್ಟದೆ ಕೆಟ್ಟೆನಲ್ಲಾ?
ಮುಟ್ಟಿದ್ದರೆ ಅದು ಕುಲಗೆಡುತ್ತಿತ್ತಲ್ಲಾ, ಇದೇ ವಾಸಿ.

ಬಾ.ರಂ ಸುರೇಶ್, ಶಿವಮೊಗ್ಗ
ನಾರಿ ಸ್ವರ್ಗಕ್ಕೆ ದಾರಿ. ಗಂಡು?



ಪ್ರಯಾಣಿಕ.

ಶೃತಿ ರಿಗ್ರೆಟ್ ಅಯ್ಯರ್, ಅಮೆರಿಕಾ
ಸರ್ಕಾರಿ ಆಸ್ಪತ್ರೆ ಸೇರಿದರೆ ಹೆಣ ಬರುತ್ತೆ. ಖಾಸಗಿ ಆಸ್ಪತ್ರೆ ಸೇರಿದರೆ ಹಣ ಹೋಗುತ್ತೆ. ಇದಕ್ಕೆ ಯಾರು ಹೊಣೆ?
ಕೆಲವೊಮ್ಮೆ ಜನರೇ. ಆರೋಗ್ಯದಿಂದಿರಲು ಅವರಿಗೇನು ರೋಗ?

ಅಮರಯ್ಯಾ ಪತ್ರಿಮಠ, ಸುರಪುರ
ಜಾಣ್ಮೆ ಎನ್ನುವುದು ಮಾತಿನಲ್ಲಿರಬೇಕೋ ಕೃತಿಯಲ್ಲಿರಬೇಕೋ?
ಆಲೋಚನೆಯಲ್ಲಿ, ಅನುಷ್ಠಾನದಲ್ಲಿ.

ವಿ.ಎಸ್. ಹಿಂದೂಪುರ, ಬಳ್ಳಾರಿ
ಶವ, ಶಿವ, ಶಾಂತಿ; ಮೂರೂ ಶಕಾರಗಳೇ ಇವೆಯಲ್ಲಾ?
ಶ ಎಂದರೆ ಮಂಗಳ ಎಂಬ ಅರ್ಥವಿದೆ. ಇವು ಮೂರೂ ಮಂಗಳ–way.

ಕಾವ್ಯಶ್ರೀ ಪತ್ರಿಮಠ, ಸುರಪುರ
ಪ್ರಜ್ಞಾವಂತ ನಾಗರಿಕನ ಲಕ್ಷಣಗಳಾವುವು?
ಪೊಲ್ಯೂಷನ್‌ಗಳ ಮಧ್ಯೆಯೂ ಪ್ರಜ್ಞೆ ತಪ್ಪದಿರುವುದು.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಮಹತ್ವದ ಘಟನೆಗಳನ್ನೂ ಕಾಕತಾಳೀಯ ಎನ್ನುವರಲ್ಲಾ ರಾಂ?
ಕಾಕ – ಪೌರುಷ; ತಾಳು – ಹೊಂದು; ಪೌರುಷದಿಂದ ಸಾಧಿಸಿದ್ದೇ ಕಾಕತಾಳೀಯ!

ನಾಗರಾಜ ಮಾದೇಗೌಡ, ಕನಕಪುರ
ಎಂದೋ ಘಟಿಸಿದ ದಾರುಣ ಹತ್ಯೆಯ ಸಿನಿಮಾವನ್ನು ಸರ್ಕಾರವೇ ಪ್ರಾಯೋಜಿಸಲು ಕಾರಣ?
ಚಿತ್ರ–ಹಿಂಸೆ ಎಂದರೇನೆಂದು ಜನಕ್ಕೆ ತಿಳಿಯಲೆಂಬ ಸದುದ್ದೇಶ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಸಮಸ್ಯೆಗೆ ಪರಿಹಾರವೇ ಇಲ್ಲದಿದ್ದರೆ ಏನಾಗುತ್ತದೆ?
ಆ ಸಮಸ್ಯೆಗಳು ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಯ ದಾಳಗಳಾಗುತ್ತವೆ.

ಎಂ.ಟಿ. ರಮಾನಂದರೆಡ್ಡಿ, ಮದಕರಿಪುರ
ಸ್ನಾನದ ಸಾಬೂನು ಜಾಹೀರಾತುಗಳನ್ನು ಜಲಪಾತದ ನೀರಿನಲ್ಲೇ ತೋರಿಸಬೇಕೇ?
ಹಾಗೆ ತೋರಿದರೆ ಮಾತ್ರ ಸೋಪಿಷ್ಟರು, ವಾಹ್! ಕ್ಯಾ bath ಹೈ ಎನ್ನುವುದಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು
ದೊಡ್ಡ ದೊಡ್ಡ ಮನುಷ್ಯರೇ ಕಳ್ಳತನ ಮಾಡುತ್ತಾರಲ್ಲಾ?
ಅದು ಪರಂಪರೆಗೆ ಸಲ್ಲಿಸುವ ಗೌರವ. ಕಳ್ಳತನ 64 ವಿದ್ಯೆಗಳಲ್ಲಿ ಒಂದೆಂದು ಪರಂಪರೆ ಹೇಳಿದೆಯಲ್ಲ!

## ವಾರದ ಪ್ರಶ್ನೆ

ಭಾರತಿ ಗಂಗಾಧರ್, ಬೆಂಗಳೂರು
ಅವಕಾಶವಂಚಿತ ನಟರು ತೀರಿಕೊಂಡಾಗಲೂ ಚಿತ್ರರಂಗಕ್ಕೆ ಭಾರಿ ನಷ್ಟವಾಯಿತೆನ್ನುವರಲ್ಲ, ಇದು ಸರಿಯೇ?
ಬಿಟ್ಟಿ ಸಿಗುತ್ತಿದ್ದ ನಟರು ಸತ್ತರೆ ರಂಗಕ್ಕೆ ನಷ್ಟವೇ.

ಸಿದ್ಧಾರ್ಥ ಹೆಬ್ಬಾರ್, ಈದು
ತಿಂಡಿ ಮೆಲ್ಲುವವರಿಗೆ ಜಿಹ್ವಾಚಾಪಲ್ಯ. ಮಾತಿನ ಮಲ್ಲರಿಗೆ?
ಕರ್ಣಚ್ಛೇದ ವಾಂಛೆ.

ಮಲ್ಲಿಕಾರ್ಜುನ, ಸುರಧೇನುಪುರ
ಜನವಾಣಿ ಬೇರು; ಕವಿವಾಣಿ ಹೂವು. ಆಕಾಶವಾಣಿ?
ಕವಿವಾಣಿಯನ್ನು ತಲಸ್ಪರ್ಶಿಯಾಗಿಸುವ ಬಿಳಲು.

ಬಿ. ಚಂದ್ರೇಗೌಡ, ಬೆಂಗಳೂರು
ಆಡಿ ಬಾ ನನ ಕಂದ; ಅಂಗಾಲ ತೊಳೆದೇನು; ಎನ್ನುವ ಹೆಂಗಳೆಯರು ಈಗಲೂ ಇದ್ದಾರೆಯೆ?



ಹೂಂ. ಬೇಬಿ ಸಿಟಿಂಗ್ ಸೆಂಟರ್‌ನ ಆಯಾಗಳು – ಪೋಷಕರು ಎದುರಿಗಿದ್ದಾಗ!

ಸುದೀಪ್ ಡಿ.ಆರ್. ದೇವರಹೊಸಹಳ್ಳಿ
ಜೀವನದಲ್ಲಿ ಸುಖಗಳಿಗಿಂತ ದುಃಖಗಳೇ ಜಾಸ್ತಿ ಇವೆಯಲ್ಲ, ಯಾಕೆ?
ಎಷ್ಟೋ ಜನರಿಗಿಲ್ಲದ್ದು ನಮಗಿದೆ ಎನ್ನುವುದಕ್ಕಿಂತ ಕೆಲವರಿಗಿರುವುದು ನಮಗಿಲ್ಲವೆಂದು ಚಿಂತಿಸುವುದರಿಂದ.

ಮೋಹನರಾಜು ಎಸ್. ಎ. ಶಂಕರಘಟ್ಟ
ಕಡಿಮೆ ತಿಂದಷ್ಟೂ ದೇಹಕ್ಕೆ ಒಳ್ಳೆಯದು. ಜಾಸ್ತಿ ದುಡಿದಷ್ಟೂ?
ಜಿ.ಎಸ್.ಟಿ. ಇಲಾಖೆಗೆ ಒಳ್ಳೆಯದು!

■ ರಾಮ್

ಪ್ರಶ್ನೆಗಳನ್ನು editorsu@sudha.co.in ಕಳಿಸಿ